## ಮತಾಂತರ-ತತ್ತ್ವಾಂತರ

**ತತ್ತ್ವ** ಬೇರೆ ಮತ ಬೇರೆ. ತತ್ತ್ವವು ಜಗತ್ತಿನ ಆತ್ಯಂತಿಕ ಸತ್ಯದ ಸ್ವರೂಪಕ್ಕೆ ಸಂಬಂಧಪಟ್ಟಿರುವುದು. ಮತವೆಂದರೆ ಆ ಸತ್ಯದ ಮೇಲೆ ಆರೋಪಿಸಲ್ಪಡುವ ಗುಣರೂಪಾದಿಗಳು, ಅಭಿಪ್ರಾಯಗಳು ಇತ್ಯಾದಿ. ಇವುಗಳೇ ವಿಸ್ತಾರಗೊಂಡು ಅನೇಕ ಮತೀಯ ಭಾವನೆಗಳು, ಅನುಷ್ಠಾನಗಳು, ಆಚಾರಗಳು, ಇವಕ್ಕೆ ಸಂಬಂಧಪಟ್ಟ ಗ್ರಂಥಗಳು, ಕ್ರಿಯಾವಿಧಿಗಳು ಇತ್ಯಾದಿ ಬೆಳೆಯುತ್ತಾ ಹೋಗುತ್ತವೆ ಮತ್ತು ವಿವಿಧ ಮತಗಳು ಹುಟ್ಟುತ್ತಾ ಹೋಗುತ್ತವೆ. ಹೀಗೆ ಮೂಲ ಸತ್ಯದಿಂದ ನಾವು ದೂರವಾಗುತ್ತೇವೆ. ಒಬ್ಬ ವ್ಯಕ್ತಿಗೆ ಸನ್ಮಾನ ಮಾಡುವಾಗ ಹೂವು ಹಾರ ತುರಾಯಿಗಳ ರಾಶಿಯನ್ನೇ ಅವನ ಮೇಲೆ ಸುರಿದು ಕೊನೆಗೆ ಆ ವ್ಯಕ್ತಿಯೇ ಕಾಣಿಸದಂತಾಗುತ್ತದೆ. ಈಗ ದೇವರ ಸ್ಥಿತಿಯೂ ಹಾಗೆಯೇ ಆದಂತಿದೆ. **ಮತವೇ ಪ್ರಧಾನವಾಗಿ ತತ್ತ್ವವನ್ನು ಮರೆಯುತ್ತೇವೆ.** ತತ್ತ್ವ ಯಾವಾಗಲೂ ಒಂದೇ ಆಗಿರುವಂತಹುದು, ಆದರೆ ಮತ ಬದಲಾಗಬಹುದು ಮತ್ತು ಬದಲಾಗುತ್ತದೆ. ಸಂಸ್ಕೃತದಲ್ಲಿ ಒಂದು ಜನಪ್ರಿಯ ಶ್ಲೋಕವಿದೆ:

**ಏಕವರ್ಣಂ ಯಥಾ ದುಗ್ಧಂ ಭಿನ್ನವರ್ಣಾಸು ಧೇನುಷು ।**
**ತಥೈವ ಧರ್ಮವೈಚಿತ್ರಂ ತತ್ತ್ವಮೇಕಂ ಪರಂ ಸ್ಮೃತಮ್ ॥**

"ಹಸುಗಳ ಬಣ್ಣ ಬೇರೆಯಾದರೂ ಹಾಲಿನ ಬಣ್ಣ ಒಂದೇ ಆಗಿರುತ್ತದೆ. ಹಾಗೆಯೇ ಧರ್ಮವೈವಿಧ್ಯವಿದ್ದರೂ ಪರತತ್ತ್ವವು ಒಂದೇ."

ಬಹುವಿಧ ಆಹಾರಪದಾರ್ಥಗಳಿದ್ದರೂ ಪೌಷ್ಟಿಕಾಂಶ ಒಂದೇ. ಈ ಪೌಷ್ಟಿಕಾಂಶಕ್ಕಾಗಿಯೇ ನಾವು ಆಹಾರವನ್ನು ಸ್ವೀಕರಿಸುವುದು. ಆದರೆ ಎಷ್ಟೋ ವೇಳೆ ಈ ಪೌಷ್ಟಿಕಾಂಶವನ್ನು ಮರೆತು ಕೇವಲ ರುಚಿಯೇ ಪ್ರಧಾನವಾಗಿ ದೇಹಾರೋಗ್ಯ ಕೆಡುತ್ತದೆ. ಹಾಗೆಯೇ ತತ್ತ್ವವೇ ಪ್ರಧಾನವಾದರೂ, ತತ್ತ್ವಕ್ಕಾಗಿಯೇ, ತತ್ತ್ವವನ್ನು ಆಧರಿಸಿಯೇ ಮತಗಳಿರುವುದಾದರೂ, ತತ್ತ್ವವನ್ನು ಮರೆತು ಮತಕ್ಕೆ ಅಂಟಿಕೊಳ್ಳುತ್ತೇವೆ. ಇದರ ಪರಿಣಾಮವಾಗಿ ಸಮಾಜದ ಆರೋಗ್ಯ ಕೆಡುತ್ತದೆ.

ನಾವು ಸಾಮಾನ್ಯಾರ್ಥದಲ್ಲಿ ಯಾವುದನ್ನು ಧರ್ಮ ಎಂದು ಕರೆಯುತ್ತೇವೆಯೊ ಅದು ಮತಕ್ಕೆ ಸಂಬಂಧಪಟ್ಟಿರುವುದು. ಮತಗಳ ಹಿಂದಿರುವ, ಮತಗಳಿಂದ ಮರೆಯಾಗಿರುವ, ತತ್ತ್ವ ಅಥವಾ ಸತ್ಯವನ್ನು ಅರಿಯುವ, ಪಡೆಯುವ ಹಂಬಲ ಮತ್ತು ಅದಕ್ಕಾಗಿ ಕೈಗೊಳ್ಳುವ ವಿವಿಧ ಸಾಧನೆಗಳನ್ನೇ **ಆಧ್ಯಾತ್ಮಿಕತೆ** ಎಂದು ಕರೆಯುವುದು. ಕೇವಲ ಮತ ಆಧ್ಯಾತ್ಮಿಕವಾಗಲಾರದು. ಮತವೈವಿಧ್ಯವಿರುವುದರಿಂದ **ಮತಾಂತರ** ಸಾಧ್ಯ, ಆದರೆ ತತ್ತ್ವ ಒಂದೇ ಆಗಿರುವುದರಿಂದ **ತತ್ತ್ವಾಂತರ** ಸಾಧ್ಯವಿಲ್ಲ. ತತ್ತ್ವದಲ್ಲಿಯೇ ಆಸಕ್ತಿಯುಳ್ಳವನಿಗೆ, ಅಂದರೆ ನಿಜವಾದ ಆಧ್ಯಾತ್ಮಿಕ ಪಿಪಾಸುವಿಗೆ ಯಾವ ಮತಾಂತರದ ಆವಶ್ಯಕತೆ ಇರುವುದಿಲ್ಲ. ಇದು ಅಂತರಂಗದ ವಿಷಯ. ಅಂತರಂಗದಲ್ಲಿ ಭಗವಂತನನ್ನು ನೆನೆಯುವುದಕ್ಕೆ ಯಾವ ಮತವಾದರೇನು? **ಆದ್ದರಿಂದ ನಿಜವಾದ ಆಧ್ಯಾತ್ಮಿಕತೆಗೂ ಮತಾಂತರಕ್ಕೂ ಯಾವ ಸಂಬಂಧವೂ ಇಲ್ಲ.** ಪ್ರಾಪಂಚಿಕತೆಯಿಂದ ಆಧ್ಯಾತ್ಮಿಕತೆಗೆ ಪರಿವರ್ತನೆಯೇ ಬೇರೆ, ಮತಾಂತರವೇ ಬೇರೆ. **ಮತಾಂತರ ಒಂದು ಸೆಕ್ಯುಲರಿಸಮ್ ಭಾವನೆ! –ಅಂದರೆ ಅದೊಂದು ಪ್ರಾಪಂಚಿಕ ವಿಷಯ. ಅದಕ್ಕೂ ನಿಜವಾದ ಧರ್ಮಕ್ಕೂ ಸಂಬಂಧವಿಲ್ಲ.** ಮತಾಂತರ ಪ್ರಕ್ರಿಯೆ ಸಂಖ್ಯಾವೃದ್ಧಿಗೆ ಸಂಬಂಧಪಟ್ಟ ವಿಷಯ. ಬ್ಯಾಂಕ್ ಮುಂತಾದವುಗಳು ಹೂಡಿಕೆದಾರರ ಸಂಖ್ಯೆಯನ್ನೂ, ವ್ಯಾಪಾರಿಗಳು ಗಿರಾಕಿಗಳನ್ನೂ ಹೆಚ್ಚಿಸಿಕೊಳ್ಳುವ ಪ್ರಯತ್ನದಂತೆಯೇ ಇದು.

ಮನಶ್ಶಾಸ್ತ್ರದ ದೃಷ್ಟಿಯಿಂದ ನೋಡುವುದಾದರೆ ಯಥಾರ್ಥ ಆಧ್ಯಾತ್ಮಿಕ ಶ್ರದ್ಧೆ ಇಲ್ಲದಿರುವಾಗ ಆಯಾಯ ಮತದ ಅನುಯಾಯಿಗಳ ಸಂಖ್ಯಾವೃದ್ಧಿ ಆಂತರಿಕ ತೃಪ್ತಿಯನ್ನು ನೀಡುತ್ತದೆ. ಇದು ಅಶ್ರದ್ಧೆಗೆ ಒಂದು ಪರ್ಯಾಯ (substitute) ಆಗುತ್ತದೆ. ಯಥಾರ್ಥ ಆಧ್ಯಾತ್ಮಿಕ ಒಲವುಳ್ಳವನು, ಭಗವತ್ ಶ್ರದ್ಧೆ ಉಳ್ಳವನು ತನ್ನ ಪಾಡಿಗೆ ತಾನು ಸಾಧನೆಯಲ್ಲಿ ನಿರತನಾಗಿರುತ್ತಾನೆ. ಅವನು ಯಾವುದೇ ಧಾರ್ಮಿಕ ವಲಯಕ್ಕೆ ಸೇರಿರಬಹುದು, ಅದು ಅವನಿಗೆ ಗೌಣ. ಅವನು ತಾನಿರುವ ಧಾರ್ಮಿಕ ವಲಯವನ್ನು ಮೀರಿ ನಿಂತಿರುತ್ತಾನೆ. ಹಾಗಿಲ್ಲದಿದ್ದರೆ ಅವನನ್ನು ನಿಜವಾದ ಆಧ್ಯಾತ್ಮಿಕ ವ್ಯಕ್ತಿ ಎಂದು ಕರೆಯಲಾಗುವುದಿಲ್ಲ. ಅವನು ತನ್ನ ಆಧ್ಯಾತ್ಮಿಕ ಸಾಧನೆಗೆ ಪೂರಕವಾದ ಅಂಶಗಳನ್ನು ಎಲ್ಲ ಧರ್ಮಗಳಿಂದಲೂ ಆರಿಸಿಕೊಳ್ಳುತ್ತಾನೆ.

ಬಾಯಾರಿಕೆಯಾಗಿರುವಾಗ ಯಾರಿಂದಲಾದರೂ ನೀರನ್ನು ಸ್ವೀಕರಿಸಬಹುದು, ಅದು ಶುದ್ಧವಾಗಿದ್ದರಾಯಿತು, ಅದರ ಮೂಲ ಮುಖ್ಯವಲ್ಲ. ತಮ್ಮ ಧರ್ಮವೇ ಶುದ್ಧವಾದುದು. ತಮ್ಮ ಧರ್ಮದ ನೀರನ್ನೇ ಕುಡಿಯಬೇಕು ಎಂದು ಕೆಲವು ಧರ್ಮದವರು ವಾದಿಸಬಹುದು. ಈ ರೀತಿಯ ವಾದ ಪ್ರತಿವಾದಗಳಿಗೆ ಕೊನೆ ಮೊದಲಿಲ್ಲ, ಅವುಗಳಲ್ಲಿ ಹುರುಳೂ ಇಲ್ಲ. ನಿಜವಾದ ಆಧ್ಯಾತ್ಮಿಕ ಸಾಧಕನು ಇವುಗಳಾವುದಕ್ಕೂ ಕಿವಿಗೊಡುವುದಿಲ್ಲ.

ಜಗತ್ತಿನ ಆತ್ಯಂತಿಕ ಸತ್ಯವನ್ನೇ, ವಿಶ್ವವ್ಯಾಪಿ ಸತ್ಯವನ್ನೇ ನಾವು ದೇವರೆಂದು ಕರೆಯುವುದು. ಬಹುಶಃ ಇದನ್ನು ಎಲ್ಲ ಧರ್ಮದವರೂ ಒಪ್ಪುತ್ತಾರೆ. ಇಂತಹ ದೇವರು ಯಾವುದೊ ಒಂದು ಮತಕ್ಕೆ ಸೇರಿದವರನ್ನು ಮಾತ್ರ ಉದ್ಧರಿಸುತ್ತೇನೆ, ಉಳಿದವರಿಗೆ ನರಕವೇ ಗತಿ ಎಂದು ಭಾವಿಸಲು ಸಾಧ್ಯವೇ ಇಲ್ಲ. ಆ ರೀತಿ ಭಾವಿಸುವ ದೇವರು ದೇವರೇ ಅಲ್ಲ – ಅವನೊಬ್ಬ ಕ್ರೂರ ಸರ್ವಾಧಿಕಾರಿಯಾಗಿರಬಹುದು, ಅಷ್ಟೇ. ಇಂತಹ ದೇವರ ಕಲ್ಪನೆ ಯಾವುದೇ ಧರ್ಮಕ್ಕೂ ಕೀರ್ತಿ ತರುವುದಿಲ್ಲ.

**ಯಥಾರ್ಥ ಧಾರ್ಮಿಕ ಶ್ರದ್ಧೆ ಇರುವವರು, ಆಧ್ಯಾತ್ಮಿಕ ಒಲವುಳ್ಳವರು ಮತಾಂತರಕ್ಕೆ ಪ್ರೇರಣೆ ನೀಡದಿರುವುದು ಮಾತ್ರವಲ್ಲದೆ, ಮತಾಂತರವನ್ನು ಬಯಸಿ ಬಂದವರಿಗೆ ಅವರದೇ ಧರ್ಮದಲ್ಲಿ ಮುಂದುವರಿಯಲು ಉತ್ತೇಜನ ನೀಡುವಷ್ಟು ಔದಾರ್ಯವನ್ನು ಹೊಂದಿರುತ್ತಾರೆ.** ಅವರ ಶ್ರದ್ಧೆ ಅವರಿಗೆ ಈ ಔದಾರ್ಯವನ್ನು ನೀಡದೇ ಇರಲಾರದು. ಕೈಯಲ್ಲಿ ದೀಪವನ್ನು ಹಿಡಿದುಕೊಂಡು ಬೆಳಕನ್ನು ಅರಸಿಕೊಂಡು ಬರುವವನಿಗೆ ತನ್ನ ಕೈಯಲ್ಲಿರುವ ದೀಪದ ಅರಿವನ್ನು ಮೂಡಿಸುವುದು ಒಳ್ಳೆಯದಲ್ಲವೆ?

ಭಾರತದಲ್ಲಿ ಬಡತನ, ಅನಕ್ಷರತೆ, ಧಾರ್ಮಿಕ ಮತ್ತು ಜಾತೀಯ ಶೋಷಣೆ ಮುಂತಾದ ಹಲವಾರು ಸಮಸ್ಯೆಗಳಿವೆ. ಇಂತಹ ಸಮಸ್ಯೆಗಳಿಂದ ಪೀಡಿತರಾದವರು ಎಲ್ಲ ಧರ್ಮದಲ್ಲಿಯೂ ಇದ್ದಾರೆ. ಇಂತಹ ಸಂದರ್ಭದಲ್ಲಿ ಎಲ್ಲ ಧರ್ಮದವರೂ 'ಕದಡಿದ ನೀರಿನಲ್ಲಿ ಮೀನು ಹಿಡಿಯುವ' ಧೋರಣೆ ಬಿಟ್ಟು, ಸ್ವಮತಾಭಿಮಾನವನ್ನು ತ್ಯಜಿಸಿ, ಎಲ್ಲರೂ ಕಲೆತು ಒಟ್ಟಾಗಿ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯದಲ್ಲಿ ತೊಡಗುವಂತಾಗಲೆಂದು ಆ ದಯಾಮಯ ಭಗವಂತನನ್ನು ಪ್ರಾರ್ಥಿಸುತ್ತೇವೆ.